ಕರ್ನಾಟಕ ವಿಧಾನ ಸಭೆ

ಸೋಮವಾರ 5ನೇ ಸೆಪ್ಟೆಂಬರ್ 1983, ಶ್ರಾವಣ ಬ॥ 13, ಶಾ. ಶಕ 1905

ವಿಧಾನಸೌಧದಲ್ಲಿರುವ ವಿಧಾನ ಸಭಾ ಸಭಾಂಗಣದಲ್ಲಿ ಸದನವು
ಬೆಳಿಗ್ಗೆ ಹತ್ತು ಗಂಟೆಗೆ ಸಮಾವೇಶಗೊಂಡಿತು

ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ವಿಷಯ : ತುರುವೇಕೆರೆ ತಾಲ್ಲೂಕಿಗೆ ಸಾರ್ವತ್ರಿಕ ಆಸ್ಪತ್ರೆಯ ಮಂಜೂರಾತಿ.

ಪ್ರ. 248 (24) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;—

(ಅ) ತುರುವೇಕೆರೆ ತಾಲ್ಲೂಕಿನ ಹಾಗೂ ಅಕ್ಕಪಕ್ಕದ ತಾಲ್ಲೂಕುಗಳ ಸುಮಾರು 30 ಕಿ.ಮೀ. ದೂರದಲ್ಲಿ ಯಾವುದೇ ಜನರಲ್ ಆಸ್ಪತ್ರೆ ಇಲ್ಲದೆ ಇದ್ದು ಲಕ್ಷಾಂತರ ಜನರು ಆರೋಗ್ಯದ ದೃಷ್ಟಿಯಿಂದ ತೊಂದರೆಗೊಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಇಲ್ಲಿ ಆಸ್ಪತ್ರೆಯೊಂದನ್ನು ಮಂಜೂರು ಮಾಡುವಂತೆ ಕ್ಷೇತ್ರದ ಶಾಸಕರಿಂದ ಮನವಿಗಳು ಬಂದಿವೆಯೇ ;

(ಇ) ಹಾಗಿದ್ದಲ್ಲಿ ಈ ವರುಷವೇ ಅಂದರೆ 1983–84 ರಿಂದಲೇ ಜನರಲ್ ಆಸ್ಪತ್ರೆಯನ್ನು ಮಂಜೂರು ಮಾಡಲಾಗುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು) .—

(ಅ) ಇಲ್ಲ.

(ಆ) ಹೌದು.

(ಇ) 1983–84ನೇ ಸಾಲಿನ ಯೋಜನಾ ವೆಚ್ಚದಲ್ಲಿ ಹಣದ ಕೊರತೆಯ ಕಾರಣ ತುರುವೇಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಸದ್ಯಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಜಿಲ್ಲಾ ಕೇಂದ್ರದಿಂದ ಸುಮಾರು 70 ಕಿಲೋಮೀಟರ್ ದೂರದಲ್ಲಿ ತುರುವೇಕೆರೆ ತಾಲ್ಲೂಕು ಇದೆ. ಅಕ್ಕಪಕ್ಕ ತಾಲ್ಲೂಕುಗಳು ಹತ್ತಿರದಲ್ಲಿರುವುದರಿಂದ, ಈ ವರ್ಷವೇ ತುರುವೇಕೆರೆಯಲ್ಲಿರತಕ್ಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರತಕ್ಕ 58 ತಾಲ್ಲೂಕುಗಳಲ್ಲಿ ಇಂಥ ಒಂದು ಪರಿಸ್ಥಿತಿ ಇದೆ. ಹಣಕಾಸಿನ ಹೊರೆಯಿಂದಾಗಿ ಈ ವರ್ಷವೇ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಕಷ್ಟವಾಗಿದೆ. ಅವಶ್ಯಕತೆ ನೋಡಿಕೊಂಡು ಮುಂದಿನ ವರ್ಷವೇ ಈಕೆಲಸವನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : ವೈದ್ಯರು ಹಾಗೂ ಉಪನ್ಯಾಸಕರುಗಳ ವರ್ಗಾವಣೆಗಾಗಿ ಮಾಡಲಾದ ವೆಚ್ಚ.

ಪ್ರ. 249 (53) ಶ್ರೀ ಧನಂಜಯ ಕುಮಾರ್ (ಮಂಗಳೂರು) .—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;—

(ಅ) 10–1–1983 ರಿಂದ ಈ ತಪಲ್‌ವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೈದ್ಯರು ಹಾಗೂ ವೈದ್ಯಕೀಯ ಕಾಲೇಜುಗಳ ಅಧ್ಯಾಪಕರುಗಳು ಸೇರಿಕೊಂಡಂತೆ ಎಷ್ಟು ಅಧಿಕಾರಿಗಳನ್ನು ಅವಧಿ ಮುಗಿದ ಮೇಲೆ ಹಾಗೂ ಎಷ್ಟು ಅಧಿಕಾರಿಗಳನ್ನು ಅವಧಿಪೂರ್ವದಲ್ಲಿ ಬೇರೆ ಕಡೆಗಳಿಗೆ ವರ್ಗಾವಣೆ ಮಾಡಿದ್ದಾರೆ ;

(ಆ) ಈ ರೀತಿಯ ವರ್ಗಾವಣೆ ಮಾಡುವಾಗ ಅನುಸರಿಸುವ ಸಾಮಾನ್ಯ ರೀತಿಗಳಾವ್ಯವು ;

(ಇ) ಈ ರೀತಿಯ ವರ್ಗಾವಣೆಗಳಿಂದಾಗಿ ತುಟ್ಟಿಭತ್ಯೆ ಪ್ರಯಾಣ ಭತ್ಯೆ ಇತ್ಯಾದಿಗಳ ಬಗ್ಗೆ ಸರ್ಕಾರದವರು ಪಟಿಸಿದ ವೆಚ್ಚವೆಷ್ಟು ?